


ಕರ್ನಾಟಕದ ಕಲಾವಿದರು

ಚಿತ್ರಕಲಾ ಸಂಪುಟ - ೬

ಕರ್ನಾಟಕ ಲಲಿತಕಲಾ ಅಕಾಡೆಮಿ
ಬೆಂಗಳೂರು

KARNATAKA ARTISTS

PAINTING PORTFOLIO - 6

KARNATAKA LALITHAKALA ACADEMY
BANGALORE

ಶಾಂತಲಿಂಗಪ್ಪ ಪಾಟೀಲ 1882- 1976

ಆಳವಂದ ತಾಲ್ಲೂಕಿನ ನಿಂಬಾಳ ಗ್ರಾಮದಲ್ಲಿ ಜನಿಸಿದ ಇವರು ಜೆ.ಜೆ.ಕಲಾಶಾಲೆಯಲ್ಲಿ ಚಿತ್ರಕಲೆ ಮತ್ತು ಶಿಲ್ಪಕಲೆಯನ್ನು ಅಭ್ಯಾಸ ಮಾಡಿದರು. ಜೊತೆಗೆ ಛಾಯಾಚಿತ್ರ ಕಲೆಯಲ್ಲೂ ಪರಿಣಿತಿ ಪಡೆದಿದ್ದರು. ಭಾವಚಿತ್ರ ರಚನೆಯಲ್ಲಿ ವಿಶಿಷ್ಟ ಶೈಲಿ ಮತ್ತು ತಂತ್ರಗಾರಿಕೆಯನ್ನು ಪಡೆದಿದ್ದ ಇವರು ರಚಿಸಿದ ನಿಜಾಮರ ವ್ಯಕ್ತಿಚಿತ್ರಗಳು ಹೈದರಾಬಾದಿನ ಸಾಲಾರ್‌ಜಂಗ್ ಮ್ಯೂಸಿಯಂನಲ್ಲಿ ಇಂದಿಗೂ ಇದೆ. ನೂರಾರು ಭಾವಚಿತ್ರ ಮತ್ತು ಪ್ರಕೃತಿ ಚಿತ್ರಗಳನ್ನು ರಚಿಸಿರುವ ಶ್ರೀಯುತರು ಸ್ವಾತಂತ್ರ್ಯ ಹೋರಾಟದಲ್ಲೂ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದ ಅವರು 1976ರಲ್ಲಿ ನಿಂಬಾಳದಲ್ಲಿ ನಿಧನರಾದರು. ಕರ್ನಾಟಕ ಕಂಡ ಕೆಲವೇ ಅವಿಸ್ಮರಣೀಯ ಕಲಾವಿದರಲ್ಲಿ ಶಾಂತಲಿಂಗಪ್ಪ ಪಾಟೀಲರೂ ಒಬ್ಬರು.

ಬಸವರಾಜ ಹಳಿಜೋಳ 1934-1982

ಬೈಲಹೊಂಗಲ ತಾಲ್ಲೂಕಿನ ದೇಶನೂರ ಗ್ರಾಮದಲ್ಲಿ ಜನಿಸಿದ ಬಸವರಾಜ ಹಳಿಜೋಳರವರು ಎಳೆವಯಸ್ಸಿನಲ್ಲೇ ಬದುಕಿಗಾಗಿ ಹುಬ್ಬಳ್ಳಿ, ಮುಂಬಯಿಗಳಿಗೆ ಅಲೆದಾಟ ನಡೆಸಿ ಮುಂಬಯಿಯ ಸರ್ ಜೆ.ಜೆ. ಕಲಾಶಾಲೆಯಿಂದ ಚಿತ್ರಕಲೆಯಲ್ಲಿ ಪದವಿಯನ್ನು ಪಡೆದರು. ವಿಶಿಷ್ಟ ವರ್ಣಮೇಳ ಮತ್ತು ಕುಂಚಗಳ ನಿರ್ವಹಣೆ ತಂತ್ರದಿಂದ ಭಾವಚಿತ್ರ ಕ್ಷೇತ್ರದಲ್ಲಿ ಹಳಿಜೋಳರು ಗಟ್ಟಿಸ್ಥಾನವನ್ನು ಪಡೆದಿದ್ದಾರೆ. ಸರಳಜೀವಿ, ಶ್ರೇಷ್ಠ ಕಲಾಗುರುಗಳಾಗಿದ್ದ ಇವರು ಮಿಣಜಗಿಯವರ ಕಲಾಮಂದಿರದ ಪ್ರಾಚಾರ್ಯರಾಗಿ ಸೇವೆಸಲ್ಲಿಸಿ, 1982ರಲ್ಲಿ ನಿಧನರಾದರೂ ಇವರು ಬಿಟ್ಟುಹೋದ ಶಿಷ್ಯವೃಂದ, ನೂರಾರು ಕಲಾಕೃತಿಗಳು ಇವರನ್ನು ಜೀವಂತವಾಗಿರಿಸಿದೆ.

ವೆಂಕಟಾಚಲಪತಿ - 1948

ಬೆಂಗಳೂರು ಜಿಲ್ಲೆಯ ದೇವನಹಳ್ಳಿಯಲ್ಲಿ ಜನಿಸಿದ ವೆಂಕಟಾಚಲಪತಿಯವರು ಬೆಂಗಳೂರಿನ ಕಲಾಮಂದಿರದಿಂದ ಚಿತ್ರಕಲೆ ಮತ್ತು ಶಿಲ್ಪಕಲೆಯಲ್ಲಿ ಡಿಪ್ಲೋಮಾ ಪಡೆದರಾದರೂ ಅವರ ಒಲವು ಹೆಚ್ಚಾಗಿ ಶಿಲ್ಪದ ಕಡೆಗೆ. ಶಾಸ್ತ್ರೀಯ ಹಾಗೂ ಆಧುನಿಕ ಶೈಲಿಗಳಲ್ಲಿ ಪರಿಣಿತಿ ಪಡೆದಿರುವ ಇವರು ಶಿಲ್ಪಗಳಲ್ಲಿ ಹಲವಾರು ಪ್ರಯೋಗಗಳನ್ನು ಮಾಡಿದ್ದಾರೆ. ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ಇವರು ರಚಿಸಿರುವ ಹಿರಿಯ ಸಾಹಿತಿಗಳ ಶಿಲ್ಪಗಳು, ಭಿತ್ತಿಚಿತ್ರಗಳು ಕರ್ನಾಟಕವನ್ನು ಸುಂದರಗೊಳಿಸಿದೆ.

ಜೆ.ಎಂ.ಎಸ್. ಮಣಿ - 1949

ಬೆಂಗಳೂರಿನಲ್ಲಿ ಜನಿಸಿದ ಜೆ.ಎಂ.ಎಸ್ ಮಣಿಯವರು ಕೆನ್‌ಕಲಾ ಶಾಲೆಯಲ್ಲಿ ಚಿತ್ರಕಲೆಯಲ್ಲಿ ಡಿಪ್ಲೋಮಾ ಪಡೆದರು. 'ಬಂಡೆ' ಶ್ರೇಣಿ ಕೃತಿಗಳೊಂದಿಗೆ, ಕಲಾಕ್ಷೇತ್ರದಲ್ಲಿ ಇದುವರೆಗೂ ಬಂಡೆಯಂತೆ ನಿಂತಿದ್ದಾರೆ. ಅವರ ಕೃತಿಗಳಲ್ಲಿನ 'ಒರಟು ಸೌಂದರ್ಯ' ನೋಡುಗನನ್ನು ಸಮ್ಮೋಹನಕ್ಕೆ ಒಳಪಡಿಸುತ್ತದೆಯಲ್ಲದೆ, ನಿರ್ವಹಣೆಯಲ್ಲಿ ಅವರಿಗಿರುವ ಹಿಡಿತ, ರಚನೆಯಲ್ಲಿ ತೆಗೆದುಕೊಳ್ಳುವ ಸ್ವಾತಂತ್ರ್ಯ, ವರ್ಣಮೇಳ ಕೃತಿಗಳಿಗೆ ಮೆರಗು ನೀಡುತ್ತದೆ. ಅವರ ಇತ್ತೀಚಿನ ಶ್ರೇಣಿಗಳಾದ ' ಬದಾಮಿ ಸೀರೀಸ್ ' ಮತ್ತು ಅಮೂರ್ತ ಶೈಲಿಯ ಚಿತ್ರಗಳಂತೂ ಕಲಾಭಿಮಾನಿಗಳ ಮನಸ್ಸನ್ನು ಸೂರೆಗೊಂಡಿದೆ.

ಡಾ. ಶಿವಾನಂದ .ಹೆಚ್. ಬಂಟನೂರು - 1967

ಬಿಜಾಪುರ ಜಿಲ್ಲೆ ಸಿಂದಗಿ ತಾಲೂಕು ಖೈನೂರದಲ್ಲಿ ಜನಿಸಿದ ಇವರು 2002ರಲ್ಲಿ ಡಾ. ಶಿವಾನಂದ ಹೆಚ್. ಬಂಟನೂರರಾದದ್ದು ಬದುಕಿನ ಕ್ಷಣಗಳನ್ನು ಸಮರ್ಥವಾಗಿ ದುಡಿಸಿಕೊಂಡುದ್ದರ ಫಲ. ಬೆಂಗಳೂರಿನ ಕೆನ್ ಕಲಾಶಾಲೆಯಲ್ಲಿ ಆರ್ಟ್ ಮಾಸ್ಟರ್ ಮತ್ತು ಡಿಪ್ಲೋಮಾವನ್ನು ಚಿತ್ರಕಲೆಯಲ್ಲಿ ಪಡೆದ ಇವರು ಕನ್ನಡ ಮತ್ತು ಚಿತ್ರಕಲೆಯಲ್ಲಿ ಗುಲ್ಬರ್ಗ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿಯನ್ನು ಪಡೆದು ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ಪಿ.ಎಚ್.ಡಿ. ಪದವಿಯನ್ನು ಪಡೆದಿರುತ್ತಾರೆ. ಸಂಘಟನೆ, ಸಾಹಿತ್ಯ ಮತ್ತು ಕಲಾ ಚಟುವಟಿಕೆಗಳಲ್ಲಿ ನಿರಂತರವಾಗಿ ತೊಡಗಿಕೊಂಡು ಗಟ್ಟಿ ಕೃತಿಗಳನ್ನು ರಚಿಸಿದ ವಿಶಿಷ್ಟ ಕಲಾವಿದ. ಚಿತ್ರ ಮತ್ತು ಶಿಲ್ಪರಚನೆಯನ್ನು ಸಮರ್ಥವಾಗಿ ನಿರ್ವಹಿಸುವ ಇವರು ಇತ್ತೀಚಿನ ಕೃತಿ ಶ್ರೇಣಿ 'ಖುತುಮತಿ' ಶಿಲ್ಪ ಪಶ್ಚಿಮದ ಪ್ರಭಾವದಿಂದ ಮುಕ್ತವಾಗಿ ಗ್ರಾಮೀಣ ಮುಗ್ಧತೆಯನ್ನು ಪಡೆದ ಕೃತಿ. ನೋಡುಗನ ಮನದೊಳಗೆ ತಟ್ಟನೆ ಪ್ರತಿಷ್ಠಾಪಿಸಿಕೊಳ್ಳುತ್ತದೆಯಲ್ಲದೆ ಕೃತಿಗಳು ಸಾಮಾಜಿಕ ಕಳಕಳಿಯನ್ನು ಎಚ್ಚರಿಸುತ್ತದೆ.

ಬಾಳಾಸಾಹೇಬ್. ಎಂ. ಪಾಟೀಲ್ - 1966

ಬಿಜಾಪುರ ಜಿಲ್ಲೆಯ ದನ್ಯಾಳ್‌ನಲ್ಲಿ ಜನಿಸಿದ ಇವರು ಚಿತ್ರಕಲೆಯಲ್ಲಿ ಡಿಪ್ಲೋಮಾ ಪಡೆದು, ಧಾರವಾಡದ ಹಾಲಭಾವಿ ಶಾಲೆಯಲ್ಲಿ ಕಲಾ ಉಪನ್ಯಾಸಕರಾಗಿದ್ದಾರೆ. ವಿದ್ಯಾರ್ಥಿ ದೆಸೆಯಿಂದಲೂ ಉತ್ತಮ ಚಿತ್ರಗಳನ್ನು ರಚಿಸುತ್ತಿರುವ ಇವರ ಕೃತಿಗಳಲ್ಲಿ ಆಧುನಿಕತೆಗಿಂತ ಸಾಂಪ್ರದಾಯಿಕ ಸೆಳಹುಗಳೇ ಹೆಚ್ಚು. ಮಿನಿಯೇಚರ್ ಚಿತ್ರಗಳಿಂದ ಹೆಚ್ಚಾಗಿ ಪ್ರಭಾವಿತರಾಗಿರುವಂತೆ ಕಾಣುವ ಇವರ ಕೃತಿಗಳಲ್ಲಿ ಗ್ರಾಮೀಣ ಸೊಬಗಿದೆ. ಕಲೆಯೊಂದಿಗೆ ಸಾಹಿತ್ಯ ಕೃಷಿಯನ್ನು ಮಾಡುತ್ತಿರುವ ಇವರು ಪ್ರಬುದ್ಧ ಲೇಖನಗಳನ್ನು ಬರೆದಿರುತ್ತಾರೆ. ಹಂಪಿ ವಿಶ್ವವಿದ್ಯಾಲಯ ಪ್ರಕಟಿಸಿರುವ ವಿಶ್ವಕೋಶ.2ರಲ್ಲಿ ಇವರ ಲೇಖನ ಪ್ರಕಟಗೊಂಡಿದೆ.

ಅಮರೇಶ್ .ಯು.ಬಿಜ್ಜಳ - 1964

ಬೆಂಗಳೂರಿನ ಕೆನ್ ಕಲಾಶಾಲೆಯಲ್ಲಿ ಚಿತ್ರಕಲೆಯ ಡಿಪ್ಲೋಮಾ ಮತ್ತು ಗ್ರಾಫಿಕ್‌ನಲ್ಲಿ ಬರೋಡಾದ ಎಂ.ಎಸ್ ವಿಶ್ವವಿದ್ಯಾಲಯದಿಂದ ಪದವಿ ಪಡೆದು, ಕೆಲವು ಕಾಲ ಕಾರ್‌ನೆಗಿ ಮೆಲ್ಲನ್ ವಿಶ್ವವಿದ್ಯಾಲಯದಲ್ಲಿ ಅಭ್ಯಾಸ ಮಾಡಿರುವ ಇವರು ಹೊಸತನಕ್ಕಾಗಿ ಹಂಬಲಿಸುವ ಮನಸ್ಸಿನ ಕಲಾವಿದರು. ಪ್ರಯೋಗ ಮತ್ತು ಹುಡುಕಾಟದಲ್ಲಿ ನಿರತರಾಗಿರುವ ಇವರು ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ ನೀಡಿದ ಏಕವ್ಯಕ್ತಿ ಪ್ರದರ್ಶನ ಕಲಾಸಕ್ತರ ಗಮನ ಸೆಳೆಯುವಲ್ಲಿ ಯಶಸ್ವಿಯಾಯಿತಲ್ಲದೆ, ಯುವ ಗುಂಪಿನಲ್ಲಿ ಸ್ಥಾನ ಕಲ್ಪಿಸಿದೆ. ಮಾನವಾಕೃತಿಗಳನ್ನು ಕೇಂದ್ರವಾಗಿಟ್ಟುಕೊಂಡು, ಒರಟು ನಿರ್ವಹಣೆಯಿಂದಲೇ ಸೂಕ್ಷ್ಮತೆಯನ್ನು ಹಿಡಿಯುವ ಆಕಾರಗಳನ್ನು ಸರಳೀಕರಿಸಿ ಅಪ್ಯಾಯಮಾನವನ್ನಾಗಿಸುವ ಇವರ ಪ್ರಯತ್ನದಲ್ಲಿ ಒಂದು ಸೊಗಸಿದೆ.

ಎನ್.ಎಸ್.ಪತ್ತಾರ್ - 1971

ಹೊಂಬಾಲದಲ್ಲಿ ಜನಿಸಿ, ಧಾರವಾಡ ಮತ್ತು ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಚಿತ್ರಕಲೆಯನ್ನು ಅಭ್ಯಸಿಸಿ ಈಗ ಮಂಗಳೂರಿನ ಮಹಾಲಸ ಚಿತ್ರಕಲಾ ಶಾಲೆಯಲ್ಲಿ ಚಿತ್ರಕಲಾವಿಭಾಗದ ಮುಖ್ಯಸ್ಥರಾಗಿದ್ದಾರೆ. ಪ್ರತಿಭಾವಂತ ಯುವತಂಡವನ್ನು ರೂಪಿಸಿ ಮಂಗಳೂರಿಗೆ ಕಲಾಕ್ಷೇತ್ರದಲ್ಲಿ ಗಟ್ಟಿಸ್ಥಾನವನ್ನು ತರುತ್ತಿದ್ದಾರೆ. ಅಕ್ರೆಲಿಕ್ ಮಾಧ್ಯಮದಲ್ಲಿ ಹಲವಾರು ಪ್ರಯೋಗಗಳನ್ನು ಮಾಡುತ್ತಾ ಕೃತಿಗಳಲ್ಲಿ ಆಧುನಿಕ ಸಂಯೋಜನೆಯೊಂದಿಗೆ ಜನಪದೀಯ ಗುಣಗಳನ್ನು ತುಂಬಿಸುತ್ತಾ ನೀಲಿ, ಕೆಂಪು, ಕಡುಹಳದಿ, ಬಿಳುಪು ಮತ್ತು ಕಂದು ಬಣ್ಣಗಳನ್ನು ಅರ್ಥಪೂರ್ಣವಾಗಿ ದುಡಿಸಿಕೊಳ್ಳುತ್ತಾರೆ. ಅಕ್ರೆಲಿಕ್ ಬಣ್ಣಕ್ಕಿರುವ ನವಿರು ಹಾಗೂ ಪಾರದರ್ಶಕ ಗುಣವನ್ನು ಸಮರ್ಪಕವಾಗಿ ನಿರ್ವಹಿಸುವ ಕೆಲವೇ ಕಲಾವಿದರಲ್ಲಿ ಇವರೂ ಒಬ್ಬರು.

ಸಿ. ವೆಂಕಟೇಶ್ - 1972

ಬೆಂಗಳೂರಿನಲ್ಲಿ ಜನಿಸಿದ ಇವರು ಕೆನ್ ಕಲಾಶಾಲೆ ಮತ್ತು ಎಂ.ಎಸ್. ವಿಶ್ವವಿದ್ಯಾಲಯದಿಂದ ಚಿತ್ರಕಲೆ ಮತ್ತು ಗ್ರಾಫಿಕ್ ಕಲೆಯಲ್ಲಿ ಪರಿಣಿತಿ ಹೊಂದಿರುತ್ತಾರೆ. ಸದಾ ಪ್ರಯೋಗಶೀಲತೆಗೆ ಒತ್ತುಕೊಡುವ ಇವರ ಮನಸ್ಸು ಸಾಮಾಜಿಕ ಏರುಪೇರುಗಳ ಬಗ್ಗೆಯೂ ಚಿಂತಿಸುತ್ತದೆ. ಹಾಗಾಗಿಯೇ ಇವರ ಕೃತಿಗಳಲ್ಲಿ ನೋವು ಮತ್ತು ದುಃಖದ ಎಳೆಗಳು ಅಂತರ್‌ಮುಖಿಯಾಗಿರುತ್ತದೆ. ಮೇಲ್ಮೈ ವಿನ್ಯಾಸಗಳನ್ನು ವಿಶಿಷ್ಟವಾಗಿ ದುಡಿಸಿಕೊಂಡರೂ ಕೃತಿಗಳಲ್ಲಿ ಒಂಟಿತನ, ನಿಶ್ಯಬ್ದತೆ ಕಾಡುತ್ತದೆ. ಮೈಸೂರಿನ ಕಾವಾದಲ್ಲಿನ ಗ್ರಾಫಿಕ್ ವಿಭಾಗದಲ್ಲಿ ಸಹಾಯಕರಾಗಿ ಸೇವೆ ಸಲ್ಲಿಸುತ್ತಿರುವ ಇವರು ಗ್ರಾಫಿಕ್ ಕ್ಷೇತ್ರದಲ್ಲಿ ಭರವಸೆಯ ಚಿಗುರು.

ಅಮೃತ್.ಎಂ. ಸಾಹು - 1969

ಗುಲ್ಬರ್ಗದಲ್ಲಿ ಜನಿಸಿದ ಅಮೃತ್. ಎಂ. ಸಾಹುರವರು, ಚಿತ್ರಕಲೆಯಲ್ಲಿ ಎಂ. ಎಫ್.ಎ. ಪದವಿ ಪಡೆದಿರುತ್ತಾರಲ್ಲದೆ, ಭರವಸೆ ಮೂಡಿಸಿರುವ ಯುವ ಕಲಾವಿದ. ಹಲವಾರು ಬಹುಮಾನಗಳನ್ನು ಪಡೆದಿರುವ ಈ ಕಲಾವಿದರ ಕೃತಿಯಲ್ಲಿನ ವಸ್ತುವಿನ ಆಯ್ಕೆ, ನಿರ್ವಹಣೆಯ ಚಮತ್ಕಾರಿಕೆ, ಮಾಧ್ಯಮದ ಮೇಲಿನ ಹಿಡಿತ, ಆಕಾರಗಳನ್ನು ದುಡಿಸಿಕೊಳ್ಳುವ ರೀತಿ ಕೃತಿಗಳಲ್ಲಿ ಲಯವನ್ನು ಉಂಟುಮಾಡುತ್ತದೆ ಮತ್ತು ನೋಡುಗರನ್ನು ಸೆಳೆಯುತ್ತದೆ.

ಶಶಿಕಾಂತ. ಹೆಚ್. ಮಶಾಲ್‌ಕರ್ - 1970

ಗುಲ್ಬರ್ಗದಲ್ಲಿ ಜನಿಸಿದ ಇವರು ಗುಲ್ಬರ್ಗ ವಿಶ್ವವಿದ್ಯಾಲಯದ ಎಂ.ಎಂ.ಕೆ ಕಾಲೇಜು ದೃಶ್ಯಕಲಾ ವಿಭಾಗದಿಂದ ಚಿತ್ರಕಲೆಯಲ್ಲಿ ಪದವಿಯನ್ನೂ, ಶಾಂತಿನಿಕೇತನದಲ್ಲಿ ಗ್ರಾಫಿಕ್‌ನಲ್ಲಿ ಡಿಪ್ಲೋಮಾ ಪಡೆದಿರುತ್ತಾರೆ. ಹಾಗಾಗಿ ಇವರ ಚಿತ್ರರಚನೆಯಲ್ಲಿ ಎರಡೂ ಗುಣಗಳ ಮಿಶ್ರಣವನ್ನು ಕಾಣಬಹುದು. ಆಧುನಿಕ ತಂತ್ರ, ಚಿಂತನೆ, ಶೈಲಿಗಳನ್ನು ಪ್ರೀತಿಸುವ ಇವರು ಇವರ ಕೃತಿಗಳಲ್ಲಿ ಈ ಗುಣಗಳನ್ನು ದಟ್ಟವಾಗಿ ಹರಿಯಬಿಡುತ್ತಾರೆ. ಇವರು ಕೃತಿಗಳಲ್ಲಿನ ಮೈವಳಿಕೆಗಳು ಕೃತಿಗಳಿಗೆ ವಿಶೇಷ ಗುಣಗಳನ್ನು ತರುವುದಲ್ಲದೆ ಗಾಂಭೀರ್ಯವನ್ನು ಲೇಪಿಸುತ್ತದೆ.

SHANTHALINGAPPA PATIL 1882 - 1976
b. Nimbala village, Alavanda Taluk. Trained at the J.J. School of Arts, Bombay in Painting and Sculpture.
Shanthalingappa Patil was also proficient in Photography. He developed a unique style and technique in portraiture, instances of which are still available at the Salar Jung Museum, Hyderabad. Known to have created hundreds of fascinating landscapes and images of the human form, Patil also involved himself spiritedly with the freedom movement.

BASAVARAJA HALIJOL 1934 - 1982
b. deshanura village, bylahongala Taluk. 1974 - Degree in Painting, J.J. School of Art, Bombay.
One of the most respected artists and art teachers of the State, Basavaraja Halijol was well-known for his superb brush strokes and colour deployment which marked his portraits and landscapes. His death in 1982 has left a vacuum, but the hundreds of awe-inspiring works and grateful students he has left behind bear testimony to his immense contribution to the world of art.

VENKATACHALAPATHI
b. 1948, Devanahalli, Bangalore Dist. He has obtained Diploma in Painting and Sculpture from Kalamandir, Bangalore.
His Fascination for Sculpture made him to study both traditional and modern styles. His experimenting attitude, has produced many beautiful sculpture in stone , Metal , fibre , glass and other mixed medium. He has won many awards including National awards. His Portraits of great writers and huge murals in different parts of Karnataka has created special place for him in art circl.

J.M.S. MANI
b.1949, Bangalore. He has obtained Diploma in painting - Ken School of Arts, Bangalore
J.M.S.Mani an familiar name in the national Art Scene. His rock Series brought many laurels and recognition to him. The rustic beauty in his works has the mesmerizing Quality. The unbounded grammar in his painting, freedom of forms and texture makes J.M.S. an unique in his field. One should enjoy the raw beauty and feel of nativity in his Badami series. His recent series Abstracts has once again proved his strength of imagination and execution.

Dr. SHIVANANDA H. BANTANUR
b. 1967, Khynoora, Sindagi taluk, Bijapur District. A M & G D Art - Ken School of Arts, Bangalore.
M A (Fine Arts) - Gulbarga University. Ph.D - Kannada University, Hampi.
A man of many interests, Dr. Bantanur is involved in both art and literary movements. Proficient in painting and sculpture, his recent series 'Rutumati' has seen him relinquish the western influence totally, and return to his rural roots.

BALASAHEB M. PATIL
b. 1966, Dhanyal, Bijapur District. He has obtained Diploma in Painting.
At Present he teaches at Halbhavi Institution, Dharwad. Since from his Student days he has been Producing, interesting works. His works are inclined towards Indian miniature. His bright colours of red blue gives folk flavour to his work.

AMARESH .U. BIJJAL
b. 1964. 1988-Diploma in Drawing and Painting - Ken School of Arts, Bangalore.
1994 - Post Diploma in Graphics from Faculty of Fine Arts, M.S.University, Baroda.
Experimentation and constant search for a new visual idiom are features seen Amaresh's works. A raw energy is perceptible in his rough yet sensitive portrayal of the human form.

N. S. PATTAR
b. 1971, Hombala (K.S). 1992-BFA (Painting) - Dharwad University. 1994 -MFA in Creative Painting - Gulbarga University.
As the Head of the Dept. of Painting in Mahalasa School of Art, Mangalore. N.S.Pattar is involved in bringing to light a group of young artists on the Mangalore art scene. One of the few artists to employ the acrylic medium effectively, Pattar is adept in experimenting with the mood and compositions in his works.

C. VENKATESH
b. 1972, Bangalore. Diploma in Drawing & Painting - Ken School of Art, Bangalore.
MFA (Printmaking) - Faculty of Fine Arts, M.S.University, Baroda.
Venkatesh, whose works are marked with a feeling of melancholy and isolation, makes an honest attempt to comprehend social inequity. A unique employment of textures in his works makes Venkatesh a bright prospect in graphics.

AMRUTH .M. SAHU
b. 1969, Gulbarga. Amruth.M.Sahu has obtained MFA in painting.
He has many awards for his credits and has drawn attention of artist and art lovers of Karnataka. Elegance in his drawings and pleasant colour schemes, neat rendering, gives a rhythm and freshness to his work.

SHASHIKANT. H. MASHALKAR
b. 1970, Gulbarga. BFA (Painting) - MMK College of Visual Arts, Gulbarga.
Post Graduate Diploma in Printmaking - Vishwa Bharati University, Shantiniketan.
Adept in both forms of Painting and Printing, Shashikant is comfortable using modern techniques, forms and ideas.
These features bring a special feel and poise to his works.

ಬಸವರಾಜ .ಎಲ್.ಜಾನೆ - 1956

ಕಲಬುರ್ಗಿಯಲ್ಲಿ ಜನಿಸಿದ ಜಾನೆಯವರು ಐಡಿಯಲ್ ಫೈನ್ ಆರ್ಟ್ಸ್ ಇನ್‌ಸ್ಟಿಟ್ಯೂಟ್‌ನಿಂದ ಚಿತ್ರಕಲೆಯಲ್ಲಿ ಡಿಪ್ಲೋಮಾವನ್ನು ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿಯನ್ನು ಪಡೆದಿರುತ್ತಾರೆ. ಇವರ ಕೃತಿಗಳಲ್ಲಿ ಸಾಮಾಜಿಕ ವಿಷಯಗಳದ್ದೇ ಮೇಲುಗೈ. ಸಂಯೋಜನಾತ್ಮಕ ದೃಷ್ಟಿಯಿಂದ ಸಂಕೇತಗಳಾಗಿ ಪಕ್ಷಿಗಳು, ಹಾಗೂ ಹಿನ್ನೆಲೆ ವಸ್ತುಗಳನ್ನು ಆರಿಸಿಕೊಂಡು ಸೂಕ್ತ ವರ್ಣ ಸಮ್ಮೇಳನದೊಂದಿಗೆ ಪ್ರಭಾವಶಾಲಿಯಾದ ರೇಖೆಗಳನ್ನೊಳಗೊಂಡ ಮಾನವ ಕೃತಿಗಳನ್ನು ರಚಿಸಿರುತ್ತಾರೆ. ವಿವಿಧ ಮಾಧ್ಯಮಗಳ ಮೇಲೆ ಅದ್ಭುತ ಹಿಡಿತ ಸಾಧಿಸಿರುವ ಜಾನೆಯವರ ಇತ್ತೀಚಿನ 'ಬುದ್ಧ' ಕೃತಿಗಳು ಅವರಿಗೆ ಕಲಾರಂಗದಲ್ಲಿ ಖ್ಯಾತಿಯನ್ನು ತಂದುಕೊಟ್ಟಿದೆ. ಇವರು ಶ್ರೇಷ್ಠ ಕಲಾಬೋಧಕರಾಗಿ ಪ್ರತಿಭಾವಂತ ಯುವ ಪೀಳಿಗೆಯನ್ನು ನಿರ್ಮಿಸಿದ್ದಾರೆ.

ಎಂ.ಸಿ. ಚೆಟ್ಟಿ - 1958

ಹುಬ್ಬಳ್ಳಿಯಲ್ಲಿ ಜನಿಸಿದ ಇವರು ಹುಬ್ಬಳ್ಳಿಯ ಕಲಾಮಂದಿರದಿಂದ ಆರ್ಟ್ ಮಾಸ್ಟರ್ ಮತ್ತು ಚಿತ್ರಕಲೆಯಲ್ಲಿ ಡಿಪ್ಲೋಮಾ ಪಡೆದರು. ಇವರ 'ಜೋಗುತಿಯರು' ಕಲಾಕೃತಿಗಳು ಇವರಿಗೆ ಕಲಾಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನವನ್ನು ತಂದುಕೊಟ್ಟಿದೆ. ಭಾವಚಿತ್ರ ರಚನೆಯಲ್ಲೂ ಪ್ರತ್ಯೇಕ ಸ್ಥಾನವನ್ನು ಕಾಯ್ದಿರಿಸಿಕೊಂಡಿದ್ದಾರೆ. ಖ್ಯಾತ ಕಲಾವಿದ ಹಳಿಜೋಳರ ಮಾರ್ಗದರ್ಶನದಲ್ಲಿ ರೂಪುಗೊಂಡ ಇವರ ವರ್ಣ ನಿರ್ವಹಣೆ, ಕ್ಯಾನ್‌ವಾಸ್‌ನಲ್ಲಿ ಹರಿದಾಡುವ ಇವರ ಕುಂಚ ನಿರ್ಮಿಸಿಕೊಡುವ ಅನುಭವ ಕೃತಿಗೆ ಅನನ್ಯತೆಯನ್ನು ತಂದುಕೊಡುತ್ತದೆ. ಮುಖಗಳನ್ನು ವಿಶಿಷ್ಟ ಸಂಯೋಜನೆಯೊಂದಿಗೆ ಪ್ರಯೋಗಗಳಿಗೆ ಒಳಪಡಿಸಿ ಒಂದು ಶೈಲಿಯನ್ನೇ ನಿರ್ಮಿಸಿದ ಚೆಟ್ಟಿಯವರು ನೂರಾರು ಭಾವಚಿತ್ರಗಳನ್ನು, ಪ್ರಕೃತಿ ಚಿತ್ರಗಳನ್ನೂ ರಚಿಸಿ ಕಲಾ ಶಿಕ್ಷಕರಾಗಿಯೂ ಕಲಾಸೇವೆ ಸಲ್ಲಿಸುತ್ತಿದ್ದಾರೆ.

ಪ್ರಭು ಹರಸೂರು - 1962

ಗುಲ್ಬರ್ಗ ಜಿಲ್ಲೆಯಲ್ಲಿ ಜನಿಸಿದ ಇವರು ಗುಲ್ಬರ್ಗಾದ ಐಡಿಯಲ್ ಫೈನ್ ಆರ್ಟ್ಸ್‌ನಿಂದ ಚಿತ್ರಕಲೆಯಲ್ಲಿ ಡಿಪ್ಲೋಮಾ ಪಡೆದಿರುತ್ತಾರೆ. ಇವರು 'ಗಂಧರ್ವ 'ಶ್ರೇಣಿಯಿಂದಿಡಿದು ಇತ್ತೀಚಿನ ತೊಗಲು ಗೊಂಬೆಗಳಿಂದ ಪ್ರಭಾವಿತರಾಗಿ ರಚಿಸಿರುವ ಕೃತಿಗಳ ತನಕ ಇವರ ಹುಡುಕಾಟ ಮತ್ತು ಕೃತಿಗಳಲ್ಲಿ ಮಾಡಿದ ಪ್ರಯೋಗಗಳು ಹತ್ತಾರು. ಎಲ್ಲಾ ಕೃತಿಗಳಲ್ಲೂ ಇವರನ್ನು ಕಾಡುವುದು ಗ್ರಾಮ್ಯ ಪ್ರಭಾವಗಳು. ಇವರ ಕೃತಿಗಳು ಎಷ್ಟು ಪ್ರಭಾವಪೂರ್ಣವಾಗಿರುತ್ತದೆ ಎಂದರೆ ಗುಲ್ಬರ್ಗಾ, ತುಮಕೂರು, ಹಾಸನ, ಮೈಸೂರು ವಿದ್ಯಾರ್ಥಿಗಳು ಅದರ ಪ್ರಭಾವವಲಯಗಳಿಂದ ತಪ್ಪಿಸಿಕೊಳ್ಳಲಾಗದಷ್ಟು. ಸಮಾಜದಲ್ಲಿ ತುಳಿತಕ್ಕೊಳಗಾದವರ ನೋವೇ ಇವರ ಹಲವಾರು ಕೃತಿಗಳ ಕೇಂದ್ರ ಹಾಗೂ ಜೀವಧ್ವನಿ. ತುಮಕೂರಿನ ರವೀಂದ್ರ ಕಲಾನಿಕೇತನದಲ್ಲಿ ಕಲಾಬೋಧಕರಾಗಿರುವ ಇವರು ಪ್ರತಿಭಾವಂತ ಯುವಕರನ್ನು ಕರ್ನಾಟಕದ ಕಲಾಕ್ಷೇತ್ರಕ್ಕೆ ನೀಡಿದ್ದಾರೆ.

ರವಿಕುಮಾರ್ ಕಾಶಿ - 1968

ಬೆಂಗಳೂರಿನಲ್ಲಿ ಜನಿಸಿ, ಕಾಲೇಜ್ ಆಫ್ ಫೈನ್ ಆರ್ಟ್‌ನಿಂದ ಚಿತ್ರಕಲೆಯಲ್ಲಿ ಪದವಿ ಪಡೆದು, ಗ್ರಾಫಿಕ್‌ನಲ್ಲಿ ಬರೋಡಾದ ಎಂ.ಎಸ್ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದಿರುವ ರವಿಕುಮಾರ್ ಕಾಶಿ ಸಮಕಾಲೀನ ಕಲೆಯ ಯುವ ಗುಂಪಿನಲ್ಲಿ ಪ್ರಯೋಗಶೀಲ ಕಲಾವಿದ. ಪ್ರದರ್ಶನದಿಂದ ಪ್ರದರ್ಶನಕ್ಕೆ ವಿವಿಧ ಮಾಧ್ಯಮಗಳೊಂದಿಗೆ ನೂತನ ಚಿಂತನೆಗಳನ್ನು ಕೃತಿಗಳಲ್ಲಿ ಬಿಂಬಿಸುವ ಇವರ ಮನಸ್ಸು ಮುಕ್ತತೆಯನ್ನು ಸ್ವೇಚ್ಛತೆಯನ್ನು ಆಸ್ವಾದಿಸುವುದರಿಂದ ಇವರ ಕೃತಿಗಳು ತುಂಟ ಮಕ್ಕಳ ಹೊಳಪಿನ ಕಣ್ಣುಗಳಿದ್ದಂತಿರುತ್ತವೆ. ವಿಶ್ವಕಲೆಯ ಬೆಳವಣಿಗೆಯನ್ನು ಎಚ್ಚರದಿಂದ ನೋಡುವ, ಆಳವಾದ ಅಧ್ಯಯನ, ಕೃತಿನಿರ್ಮಾಣದ ಹಂತದಲ್ಲಿ ಧ್ಯಾನಿಸುವ ಶಿಸ್ತು ಇವರ ಕೃತಿಗಳಿಗೆ ಗಟ್ಟಿತನವನ್ನು ತಂದುಕೊಟ್ಟಿದೆ. ಕಲಾಬರವಣಿಗೆ, ಸಾಹಿತ್ಯ ಚಟುವಟಿಕೆಗಳು ಇವರ ಹವ್ಯಾಸ.

ಬಾಬು ರಾವ್ ನಡೋಣಿ - 1963

ಬೆಳಗಾಂ ಜಿಲ್ಲೆಯ ಅಥಣಿಯಲ್ಲಿ ಜನಿಸಿದ ಇವರು ದಾವಣಗೆರೆ ಕಲಾಶಾಲೆಯಿಂದ ಚಿತ್ರಕಲೆಯಲ್ಲಿ ಡಿಪ್ಲೋಮಾ ಪಡೆದ ನಂತರ, ಭಾವಚಿತ್ರ ರಚನೆಯಲ್ಲಿ ತೊಡಗಿಸಿಕೊಂಡು ಇದುವರೆಗೂ ನೂರಾರು ಗಣ್ಯರ ಭಾವಚಿತ್ರವನ್ನು ರಚಿಸಿರುತ್ತಾರೆ. ಇತ್ತೀಚೆಗೆ ಅವರ ಒಲವು ಅಮೂರ್ತ ಚಿತ್ರಗಳ ಕಡೆಗೆ ತಿರುಗಿರುವುದು ಒಳ್ಳೆಯ ಬೆಳವಣಿಗೆ. ಸಂಯೋಜನಾ ದೃಷ್ಟಿಯಿಂದ ಗಟ್ಟಿಕೃತಿಗಳನ್ನು ಮೂಡಿಸಿರುವುದು ಅವರ ಸಾಧನಾ ವೈಶಿಷ್ಟ್ಯ.

ಎಂ.ಜಿ. ದೊಡ್ಡಮನಿ -1968

ಗುಲ್ಬರ್ಗ ಜಿಲ್ಲೆಯ ಕಣ್ಣೂರಿನಲ್ಲಿ ಜನಿಸಿದ ಇವರು ಗುಲ್ಬರ್ಗದ ಕಾಲೇಜ್ ಆಫ್ ವಿಷುವಲ್ ಆರ್ಟ್ಸ್‌ನಿಂದ ಚಿತ್ರಕಲೆಯಲ್ಲಿ ಪದವಿ ಪಡೆದು ಶಾಂತಿನಿಕೇತನದಲ್ಲಿ ಗ್ರಾಫಿಕ್‌ನಲ್ಲಿ ವ್ಯಾಸಂಗ ಮಾಡಿ ಈಗ ಬೆಂಗಳೂರಿನ ಚಿತ್ರಕಲಾ ವಲಯದಲ್ಲಿ ಗಮನಾರ್ಹ ಯುವಪ್ರತಿಭೆಯಾಗಿದ್ದಾರೆ. ವಿಶಿಷ್ಟ ರೀತಿಯ ಸಂಯೋಜನೆ, ಚಿಂತನೆ, ಸತತ ಪರಿಶ್ರಮ ಇವರ ಕೃತಿಗಳಿಗೆ ಸ್ವಂತಿಕೆ ಹಾಗೂ ಗಾಂಭೀರ್ಯವನ್ನು ತಂದುಕೊಟ್ಟಿದೆ. ಇವರ 'ಹೆಡ್' ಮತ್ತು 'ಬುದ್ಧ' ಶ್ರೇಣಿಯ ಚಿತ್ರಗಳಲ್ಲಿ ಇವರು ಮೈವಳಿಕೆಯನ್ನು ದುಡಿಸಿಕೊಂಡಿರುವ ರೀತಿ ಮತ್ತು ಕೃತಿಯಲ್ಲಿನ ಸ್ಪಂದನಾಶಕ್ತಿ ನೋಡುಗರಿಗೆ ಆಳವಾದ ಅನುಭವ ನೀಡುತ್ತದೆ.

ಬಾಬು ಈಶ್ವರ ಪ್ರಸಾದ್- 1968

ಹಾಸನದಲ್ಲಿ ಜನಿಸಿ, ಚಿತ್ರಕಲಾ ಪರಿಷತ್, ಬರೋಡಾ ಕಲಾ ಶಾಲೆಯಲ್ಲಿ ಚಿತ್ರಕಲೆ ಮತ್ತು ಗ್ರಾಫಿಕ್‌ನ್ನು ಅಧ್ಯಯನ ಮಾಡಿ, ಯುವ ತಂಡಗಳೊಂದಿಗೆ ಕಾರ್ಯನಿರತರಾಗಿರುವ ಈಶ್ವರ ಪ್ರಸಾದರ ಕಣ್ಣುಗಳಿಗೆ ವಿಶಿಷ್ಟ ಗುಣವಿದೆ. ಭಿನ್ನ ಸಂಯೋಜನೆಯೊಂದಿಗೆ ಕನಸ ಸೃಷ್ಟಿಸುವ ಪ್ರಖರ ಬಣ್ಣಗಳು, ಆಯ್ದುಕೊಳ್ಳುವ ವಸ್ತು, ಪಕ್ವ ನಿರ್ವಹಣೆ ನಮಗೆ ಹೊಸ ಅನುಭವವನ್ನು ಕಟ್ಟಿಕೊಡುತ್ತದೆಯಲ್ಲದೇ, ಇವರ ಕೃತಿಗಳಲ್ಲಿನ ಕುಸುರಿ ಕೆಲಸ ವಿಶಿಷ್ಟ ಆಯಾಮವನ್ನೂ ನಿರ್ಮಿಸುತ್ತದೆ. ಪ್ರಯೋಗ, ಚಿಂತನೆ ಮತ್ತು ಅಧ್ಯಯನ ಗುಣ ಇವರ ಕೃತಿಗಳಿಗೆ ಗಾಂಭೀರ್ಯವನ್ನು ತಂದುಕೊಟ್ಟಿದೆ.

ರೂಪಾ. ಬಿ.ಆರ್

ಹಾಸನದಲ್ಲಿ ಜನಿಸಿದ ರೂಪಾರವರು ಬೆಂಗಳೂರಿನ ಚಿತ್ರಕಲಾ ಪರಿಷತ್‌ನಿಂದ ಚಿತ್ರಕಲೆಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿರುತ್ತಾರೆ. ಇವರು ಸೂಕ್ಷ್ಮ ಸಂವೇದನೆಯ ಕಲಾವಿದೆ. ರೂಪಾರವರ ಕೃತಿಗಳು ಹಂತಹಂತಗಳಲ್ಲಿ ನಿರ್ಮಾಣಗೊಂಡು, ಅಭಿವ್ಯಕ್ತಿಸುವ ಭಾವವೇ ವಿಶಿಷ್ಟವಾಗಿರುತ್ತದೆ. ಅಂತರ್ ಶಕ್ತಿ, ಅಂತರ್‌ಮುಖಿ ಭಾವನೆಗಳನ್ನು ಕೃತಿಗಳಲ್ಲಿ ಕಟ್ಟಿಕೊಡುವಲ್ಲಿ ವಹಿಸುವ ಪರಿಶ್ರಮ, ಆಕಾರ, ರೂಪಗಳನ್ನು ಅಡಗಿಸುತ್ತಲೇ ರೇಖೆಗಳನ್ನು ಪದರ ಪದರಗಳಲ್ಲಿ ಅಡಗಿಸಿ ಅನಾವರಣಗೊಳಿಸುವ ಇವರ ತಂತ್ರ ನೋಡುಗರಿಗೆ ಹೊಸ ಪ್ರಪಂಚವನ್ನು ಸೃಷ್ಟಿಸಿ ಕೊಡುತ್ತದೆ. ತಾಳ್ಮೆ ಮತ್ತು ಚಿಂತನೆಯನ್ನು ಅಪೇಕ್ಷಿಸುವ ಇವರ ಕೃತಿಗಳು ನವಿರಾದ ಛಾಪನ್ನು ಮನಸ್ಸಿನಲ್ಲಿ ಮೂಡಿಸುತ್ತದೆ.

ಪೆರ್ಮುದೆ ಮೋಹನ್ ಕುಮಾರ್-1960

ಪ್ರಕೃತಿಯ ಮಡಿಲ ಪೆರ್ಮುದೆಯಲ್ಲಿ ಜನಿಸಿದ ಮೋಹನ್ ಕುಮಾರ್ ಮಂಗಳೂರಿನ ಮಹಾಲಸ ಚಿತ್ರ ಶಾಲೆಯಲ್ಲಿ ಚಿತ್ರಕಲೆಯಲ್ಲಿ ಡಿಪ್ಲೋಮಾ ಪಡೆದು, ಕಲಾಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವ ಇವರು, ಪ್ರಕೃತಿಯ ಸೊಬಗಿಗೆ ತಮ್ಮದೇ ರೀತಿಯಲ್ಲಿ ಸ್ಪಂದಿಸುತ್ತಿರುವ ಯುವ ಕಲಾವಿದರು. ಇವರ ಅಭಿವ್ಯಕ್ತಿಗೆ ಜಲವರ್ಣ ಮಾಧ್ಯಮವನ್ನು ಬಳಸಿಕೊಂಡು ಹಲವಾರು ರಮಣೀಯ ಚಿತ್ರಗಳನ್ನು ರಚಿಸಿರುತ್ತಾರೆ. ಇವರ ಕೃತಿಗಳಲ್ಲಿ ಜಿ.ಎಸ್. ಶೆಣೈಯವರ ಪ್ರಭಾವ ಕಂಡರೂ, ಸ್ವಂತ ಶೈಲಿ ರೂಪಿಸಿಕೊಳ್ಳುವ ಹಂಬಲ ಇವರ ಕೃತಿಗಳಲ್ಲಿದೆ. ಜಲವರ್ಣದಲ್ಲಿ ದಕ್ಕುವ ಆಕಸ್ಮಿಕ ರೂಪಗಳನ್ನು ಯಶಸ್ವಿಯಾಗಿ ದುಡಿಸಿಕೊಳ್ಳುವ ಇವರು ಟೈ ಅಂಡ್ ಡೈ ಪೇಪರ್ ಕಟ್ಟಿಂಗ್, ಬಿತ್ತಿಚಿತ್ರ , ಛಾಯಾಚಿತ್ರ ಕ್ಷೇತ್ರಗಳಲ್ಲೂ ಆಸಕ್ತಿ ಹೊಂದಿರುತ್ತಾರೆ.

ಸುನೀಲ್ ಮಮದಾಪುರ - 1975

ಬಿಜಾಪುರದಲ್ಲಿ ಜನಿಸಿದ ಇವರು ಕೆನ್ ಕಲಾಶಾಲೆಯಿಂದ ಚಿತ್ರಕಲೆಯಲ್ಲಿ ಡಿಪ್ಲೋಮಾ, ಬರೋಡಾದ ಎಂ.ಎಸ್. ವಿಶ್ವವಿದ್ಯಾಲಯದಿಂದ ಗ್ರಾಫಿಕ್ ಕಲೆಯಲ್ಲಿ ಪೋಸ್ಟ್ ಡಿಪ್ಲೋಮಾ ಪಡೆದರಲ್ಲದೆ ಲಂಡನ್‌ನಲ್ಲಿರುವ ಕಾಮನ್‌ವೆಲ್ತ್ ಆರ್ಟ್ ಅಂಡ್ ಕ್ರಾಫ್ಟ್‌ನಲ್ಲಿ ಅಭ್ಯಾಸ ಮಾಡಲು ಕಾಮನ್‌ವೆಲ್ತ್ ಫೌಂಡೇಶನ್‌ರವರಿಂದ ಪ್ರಾಯೋಜಕತ್ವ ಪಡೆದರು. ಈ ಶಾಲೆಗಳಲ್ಲಿನ ಕಲಿಕೆಯೇ ಇವರ ಚಿಂತನೆಗಳ ವಿಸ್ತಾರವನ್ನು ಹೆಚ್ಚಿಸಿತಲ್ಲದೆ, ಕೃತಿಗಳಲ್ಲಿ ಗಾಂಭೀರ್ಯ ಹಾಗೂ ಸಂಕೀರ್ಣತೆಯನ್ನು ತುಂಬಿತು. ರಾಜಕೀಯ ಹಾಗೂ ಸಾಮಾಜಿಕ ವಿಶ್ಲೇಷಣಾ ನೆಲೆಯೊಂದಿಗೆ ರೂಪುಗೊಳ್ಳುವ ಕೃತಿಗಳಲ್ಲಿನ ಸಂಕೇತಗಳಲ್ಲಿ ನಿಗೂಢ ಅರ್ಥಗಳು ಬೆಸೆದುಕೊಂಡಿರುತ್ತದೆ. ಅಸಾಮಾನ್ಯ ಭಯಹುಟ್ಟಿಸುವ, ಉಸಿರು ಕಟ್ಟಿಸುವ ವಾತಾವರಣದಲ್ಲೂ 'ನಂಬಿಕೆಯ ತಾಣ' ವನ್ನು ಅರಸುವ ಇವರ ಪಯಣ ದ್ವಂದ್ವ ನೆಲೆಗಳಲ್ಲಿ ಮುಂದುವರೆಯುತ್ತದೆ.

ಅಂಬರಾಯ ಚಿನ್‌ಮಲ್ಲಿ - 1968

ಗುಲ್ಬರ್ಗ ವಿಶ್ವವಿದ್ಯಾಲಯದ ಎಂ.ಎಂ.ಕೆ. ದೃಶ್ಯಕಲಾ ಕಾಲೇಜಿನಿಂದ ಚಿತ್ರಕಲೆಯಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಅಂಬಾರಾಯ ಚಿನ್‌ಮಲ್ಲಿ ಅವರ ಕೃತಿಯಲ್ಲಿ ಪಾಶ್ಚಿಮಾತ್ಯ ಕಲೆಯ ದಟ್ಟ ಪ್ರಭಾವವಿದೆ. ಆ ಪ್ರಭಾವದೊಂದಿಗೆ ತಮ್ಮ ಮನದಾಳದಲ್ಲಿರುವ ಮಾನವಾಕಾರಗಳನ್ನು ದಪ್ಪ ಹೊರ ರೇಖೆಗಳಿಂದ ಚಿತ್ರಿಸಿ ಬಣ್ಣತುಂಬುವ, ಕೇಂದ್ರ ಚಿತ್ರಗಳನ್ನು ಹೊರತು ಪಡಿಸಿ ಉಳಿದ ಸ್ಥಳಾವಕಾಶದಲ್ಲಿ ಇವರು ತುಂಬುವ ವಿನ್ಯಾಸಗಳು ಕೃತಿಗೆ ಚಾಲನಾಶಕ್ತಿಯನ್ನು, ಆಕರ್ಷಣೆಯನ್ನುಂಟುಮಾಡುತ್ತದೆ.

BASAVARAJA .L. JANE

b. 1956, Kalburgi. Diploma in Fine Art - The Ideal Fine Art Institute, Gulbarga.
Inclined towards socially significant subjects, Basavaraj effectively incorporates symbols and deft compositional features. The artist is proficient in use of different mediums and the recent series on Buddha has etched a permanent place for him. As an effective art educationist, he has also mentored a generation of young artists.

M.C. CHETTI

b. 1958, Hubli. 1983 -Diploma in Painting , 1984 - Art Master.
Chetti's series titled 'Joguthiyaru' has earned him a special place in the field of art. Guided by the renowned artist Halijol his daring play with colour and composition provides an unique visual experience to the viewer. His paintings have an emotional appeal which he uses in producing a vast array of portraits and landscapes.

PRABHU HARASOOR

b. 1962, Gulbarga district. Diploma in Fine Art - The Ideal Art Institute, Gulbarga.
Known for his spirit of experimentation, Harasoor has come a long way since his early 'Gandharva' series to the recent works influenced by leather puppets. Inspired by the rural scene and the predicament of rural folk, his works bear his undiminished concern for them.

RAVIKUMAR KASHI

b. 1968, Bangalore. 1988-BFA (Painting) - College of Fine Arts, Bangalore.
1990 - MFA (Printmaking) - Faculty of Fine Art, M.S.University, Baroda.
As a creative artist in the contemporary milieu, Ravi Kashi is known for his sustained innovations in form, content and medium. Exposed to developments in art world wide, his works are characterized by a structural discipline and, deep understanding of the subject. Interest in art writing and literature adds a fascinating dimension to his personality.

BABURAO NADONI

b. 1963, Athani, Belgaum Dist. An Diploma holder from Davangere School of Arts in Painting.
He Specialized in Portrait making and has produced numerous paintings of great personalities and has won many applauds. His recent abstracts has sensitive pulse and strange visual experience. He strong sense of compositions has produced vibrant qualities to his paintings.

M. G. DODDAMANI

b. 1968, Kannur, Gulbarga district. 1990 - BFA (Painting) - College of Visual Arts, Gulbarga.
1992 - MFA (Graphics) - Vishwa Bharati University, Shantiniketan.
Doddamani's works impress not only because of their impeccable construction but also by their contemplative essence. The series on 'Head' and 'Buddha' bear testimony to his ability to produce thoughtful and meditative images.

BABU ESHWAR PRASAD

b. 1968, Hassan. 1989 - BFA (Painting) - College of Fine Arts, Bangalore.
1992 - MFA(Graphics) - Faculty of Fine Arts, M.S.University, Baroda.
With exceptionally brilliant compositions incorporating dazzling colours and inspired imagery, Babu Eshwar Prasad transports his viewers to a different plane. An eye for detail assists him in meticulously executing his probing images.

ROOPA. B.R.

b. Hassan. BFA (Painting) - Gulbarga University, MFA - Karnataka Chitrakala Parishat, Bangalore.
A sensitive artist, Roopa strives to form a meaningful relationship between the surface and depth in her works. A firm belief in a language of symbols and motifs seems to follow and guide her in her internal journeys.

PERMUDE MOHAN KUMAR

b. 1960, Permude, South Kanara district. Diploma in Painting - Mahalasa Art School
Mohan Kumar responds to the beauty of nature by using the medium of watercolours. Still under the influence of G.S.Shenoy Mohan Kumar's pursuit to find his own style underlines his interest in not only the water colour painting but also in paper cutting, posters and photography.

SUNEEL MAMADAPUR

b. 1975, Bijapur. 1997- Diploma in Fine Arts - Ken School of Arts, Bangalore.
2000 - Post Diploma in Graphic Arts -Faculty of Fine Arts, M S University, Baroda.
2002 - Post Experience Program (Sponsored by the Commonwealth Foundation) Glasgow Print Studio, Scotland, UK.
Mamadapur's learning is moulded by the varied patterns of education he has received. With his thought and outlook thus widened, his works have achieved a complexity and maturity. It is often seen that his social and political ideas find symbolic representation in his works, even as they hide some intriguing meanings and connotation.

AMBARAYA CHINMALLI

b. 1968. 1994 - MFA (Painting) - MMK College of Visual Art, Gulbarga.
It is easy to perceive the western influence in Chinmalli's works, which the artist has internalized to direct some colourful images and eye-catching portraits.



"3X3 FIT" BASAVARAJA .L. JANE



"JOGAMMA" M.C. CHETTI



"A-FOLK LADY" PRABHU HARSOOR



"IN YOUR REACH" RAVIKUMAR KASHI



"UNTITLED" BABURAO .V. NADONI



"THE PEACE LOTUS" M.G. DODDAMANI



"TREE SCAPE" BABU ESHWAR PRASAD



"EVOLUTION OF MAN" ROOPA .B.R



"DAY BREACK" PERMUDE MOHAN KUMAR



"KNOWLEDGE AKNOWLEDGE" SUNEEL MAMADAPUR



"COMPOSITION II" AMBARAYA CHINMALLI

